ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ: 14.09.2021.

ಸಂಖ್ಯೆ: ಕಾಶಿಇ:ಶೈವಿ:218:ಸ್ಕೌಟ್ಸ್ & ಗೈಡ್ಸ್/2020-21

**ಅಧಿಕೃತ ಜ್ಞಾಪನ**

ವಿಷಯ: ವಿಭಾಗ ಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ / ರೇಂಜರ್ ಲೀಡರ್ಸ್‌ಗಳ ಮೂಲಕ ತರಬೇತಿ ಶಿಬಿರವನ್ನು ಪದವಿ ಕಾಲೇಜುಗಳ ಉಪನ್ಯಾಸಕರು / ಉಪನ್ಯಾಸಕಿಯರುಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ:BSG/SHQ/884/2021-22 dt:27.08.2021.

********

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಈ ಘಟಕಗಳನ್ನು ನಿರ್ವಹಿಸಲು ತರಬೇತಿ ಪಡೆದ ಅಧ್ಯಾಪಕರುಗಳಿಗೆ ಜವಾಬ್ದಾರಿ ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ವಿಭಾಗ ಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ / ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರವನ್ನು ಸೆಪ್ಟೆಂಬರ್ ಮಾಹೆಯಲ್ಲಿ ಆಯೋಜಿಸಲಾಗಿದ್ದು, ಈ ತರಬೇತಿ ಶಿಬಿರಕ್ಕೆ ಬೆಂಗಳೂರು ಹಾಗೂ ಕಲಬುರಗಿ ವಿಭಾಗದ ಪದವಿ ಕಾಲೇಜುಗಳಿಂದ ಉಪನ್ಯಾಸಕರುಗಳನ್ನು ರೋವರ್ ಸ್ಕೌಟ್ ಲೀಡರ್ಸ್ ತರಬೇತಿಗಾಗಿ ಹಾಗೂ ಉಪನ್ಯಾಸಕಿಯರುಗಳನ್ನು ರೇಂಜರ್ ಲೀಡರ್ಸ್ ತರಬೇತಿಗಾಗಿ ನೇರವಾಗಿ ರಾಜ್ಯ ಸಂಸ್ಥೆಯಿಂದ ಆಯೋಜಿಸಲಾಗಿದೆ.

1) **ಬೆಂಗಳೂರು ವಿಭಾಗ** ದಿನಾಂಕ: 22.09.2021 ರಿಂದ 28.09.2021 ರವರೆಗೆ
   ಸ್ಥಳ: ಡಾ: ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ.
   **ಭಾಗವಹಿಸಬೇಕಾದ ಜಿಲ್ಲೆಗಳು:** ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ, ಗ್ರಾಮಾಂತರ, ಬಿ.ಬಿ.ಎಂ.ಪಿ. ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಮಧುಗಿರಿ, ತುಮಕೂರು, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ.

2) **ಕಲಬುರಗಿ ವಿಭಾಗ** ದಿನಾಂಕ: 22.09.2021 ರಿಂದ 28.09.2021 ರವರೆಗೆ
   ಸ್ಥಳ: ಮುರಾರ್ಜಿ ದೇಸಾಯಿ ವಸತಿ ಶಾಲೆ, ಮೋಕಾ (ಬೈರದೇವನಹಳ್ಳಿ) ಬಳ್ಳಾರಿ ತಾ.
   **ಭಾಗವಹಿಸಬೇಕಾದ ಜಿಲ್ಲೆಗಳು:** ಕೊಪ್ಪಳ, ಬಳ್ಳಾರಿ, ರಾಯಚೂರು, ಬೀದರ್, ಕಲಬುರಗಿ, ಯಾದಗಿರಿ.

ಈ ತರಬೇತಿಯಲ್ಲಿ ಭಾಗವಹಿಸಿದ ಅವಧಿಗೆ ರೋವರ್ಸ್ ಸ್ಕೌಟ್ ಮತ್ತು ರೇಂಜರ್ಸ್ ಲೀಡರ್ಸ್‌ಗಳಿಗೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

ಅಡಕ: **ಹೆಚ್ಚಿನ ವಿವರಗಳಿಗೆ ಭಾರತ್ ಸ್ಕೌಟ್ಸ್ & ಗೈಡ್ಸ್,**
ಕರ್ನಾಟಕ ರವರ ಪತ್ರ ಲಗತ್ತಿಸಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

Scanned with CamScanner

ಇವರಿಗೆ:

1. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸದರಿ ತರಬೇತಿಯಲ್ಲಿ ಭಾಗವಹಿಸುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಾಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

Scanned with CamScanner

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017; +91-80-2226 7470; +91-80-2226 1047

ಮಿಂಚಂಚೆ: info@bsgkarnataka.org / shanthigruha@scout.org.in ಅಂತರ್ಜಾಲ: www.bsgkarnataka.org

ಸಂಖ್ಯೆ:ಬಿಎಸ್‌ಜಿ:ಎಸ್‌ಹೆಚ್‌ಕ್ಯೂ: 884 : 2021-22 ದಿನಾಂಕ:27.08.2021

ಮಾನ್ಯ ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:- ವಿಭಾಗ ಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ/ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರವನ್ನು ಪದವಿ ಕಾಲೇಜುಗಳ ಉಪನ್ಯಾಸಕರಿಗೆ/ಉಪನ್ಯಾಸಕಿಯರುಗಳಿಗೆ ಸಂಘಟಿಸಲು ಅನುಮತಿ ನೀಡುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ವಿಭಾಗ ಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ/ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರವನ್ನು ಪದವಿ ಕಾಲೇಜುಗಳ ಉಪನ್ಯಾಸಕರಿಗೆ/ಉಪನ್ಯಾಸಕಿಯರುಗಳಿಗೆ ನೇರವಾಗಿ ರಾಜ್ಯ ಸಂಸ್ಥೆಯಿಂದ ಆಯೋಜಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ

| | |
|---|---|
| ತರಬೇತಿ ವಿವರಗಳು | 1. ಬೆಂಗಳೂರು ವಿಭಾಗ ದಿನಾಂಕ 22.09.2021 ರಿಂದ 28.09.2021 ರವರೆಗೆ<br>ಸ್ಥಳ: ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ.<br>ಭಾಗವಹಿಸಬೇಕಾದ ಜಿಲ್ಲೆಗಳು : ( ಬೆಂಗಳೂರು ದಕ್ಷಿಣ, ಬೆಂಗಳೂರ ಉತ್ತರ, ಬೆಂಗಳೂರು ಪೂರ್ವ, ಬೆಂಗಳೂರು ಗ್ರಾಮಾಂತರ, ಬಿಬಿಎಂಪಿ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಮಧುಗಿರಿ, ತುಮಕೂರು, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ)<br><br>2.ಕಲ್ಬುರ್ಗಿ ವಿಭಾಗ ದಿನಾಂಕ 22.09.2021 ರಿಂದ 28.09.2021 ರವರೆಗೆ<br>ಸ್ಥಳ: ಮುರಾರ್ಜಿ ದೇಸಾಯಿ ವಸತಿ ಶಾಲೆ, ಮೋಕಾ(ಬೈರದೇವನಹಳ್ಳಿ), ಬಳ್ಳಾರಿ ತಾ॥, ಬಳ್ಳಾರಿ ಜಿಲ್ಲೆ<br>ಭಾಗವಹಿಸಬೇಕಾದ ಜಿಲ್ಲೆಗಳು : ( ಕೊಪ್ಪಳ, ಬಳ್ಳಾರಿ, ರಾಯಚೂರು, ಬೀದರ್, ಕಲ್ಬುರ್ಗಿ,ಯಾದಗಿರಿ)<br><br>3. ಮೈಸೂರು ವಿಭಾಗ ದಿನಾಂಕ 25.10.2021 ರಿಂದ 31.10.2021 ರವರೆಗೆ<br>ಸ್ಥಳ: ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ.<br>ಭಾಗವಹಿಸಬೇಕಾದ ಜಿಲ್ಲೆಗಳು : (ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು,ಉಡುಪಿ, ದಕ್ಷಿಣ ಕನ್ನಡ, ಹಾಸನ)<br><br>4. ಬೆಳಗಾವಿ ವಿಭಾಗ ದಿನಾಂಕ 25.10.2021 ರಿಂದ 31.10.2021 ರವರೆಗೆ<br>ಸ್ಥಳ: ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ<br>ಭಾಗವಹಿಸಬೇಕಾದ ಜಿಲ್ಲೆಗಳು : ( ಬೆಳಗಾವಿ, ವಿಜಯಪುರ, ಕಾರವಾರ, ಶಿರಸಿ, ಧಾರವಾಡ, ಹಾವೇರಿ, ಗದಗ್, ಬಾಗಲಕೋಟೆ) |
| ವರದಿ ಮಾಡುವ ದಿನಾಂಕ | ಪ್ರಾರಂಭದ ದಿನಾಂಕದಂದು ಬೆಳಗ್ಗೆ 9.00 ಗಂಟೆಗೆ |
| ಬಿಡುಗಡೆ ದಿನಾಂಕ | ಶಿಬಿರ ಮುಕ್ತಾಯದ ಕೊನೆಯ ದಿನಾಂಕದಂದು ಸಂಜೆ 4 ಗಂಟೆಗೆ |
| ನೊಂದಾವಣಿ ಶುಲ್ಕ | ಪ್ರತಿಯೊಬ್ಬರಿಗೆ ರೂ.50/- |
| ದಳ ನೊಂದವಣಿ ಶುಲ್ಕ | ಪ್ರತಿ ರೋವರ್ ಘಟಕಕ್ಕೆ ದಳ ನೋಂದವಣಿ ರೂ 194/-<br>ಪ್ರತಿ ರೇಂಜರ್ ಘಟಕಕ್ಕೆ ದಳ ನೋಂದವಣಿ ರೂ.194/- |
| ಯಾರು ಭಾಗವಹಿಸಬಹುದು | ಪದವಿ ಕಾಲೇಜುಗಳ ಪುರುಷ ಉಪನ್ಯಾಸಕರು ಮತ್ತು ಮಹಿಳಾ ಉಪನ್ಯಾಸಕಿಯವರುಗಳು ಹಾಗೂ – ಕಛೇರಿ ಅಥವಾ ಗ್ರಂಥಾಲಯ ಸಿಬ್ಬಂದಿಗಳು ಭಾಗವಹಿಸಬಹುದು. |

| | |
|---|---|
| ಶಿಬಿರದ ನೊಂದಣಿ ಶುಲ್ಕ/ ದಳ ನೊಂದಣಿ ಶುಲ್ಕ ಮತ್ತು ಪ್ರಯಾಣ ವೆಚ್ಚ | ಆಯಾಯ ಪದವಿ ಕಾಲೇಜುಗಳ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್/ರೇಂಜರ್ ನಿಧಿಯಿಂದ ಭರಿಸುವುದು. |
| ವಸತಿ ಮತ್ತು ಊಟೋಪಚಾರ | ರಾಜ್ಯ ಸಂಸ್ಥೆಯ ವತಿಯಿಂದ ವ್ಯವಸ್ಥೆ ಮಾಡಲಾಗುವುದು. |
| ಸಮವಸ್ತ್ರ | ಶಿಬಿರ ಸ್ಥಳದಲ್ಲಿ ಸಮವಸ್ತ್ರವನ್ನು ನೀಡಲಾಗುವುದು. ಅಂದಾಜು ರೂ.2000/-ಗಳನ್ನು ರೋವರ್/ರೇಂಜರ್ ನಿಧಿಯಿಂದ ಭರಿಸಿ ಸಂಬಂಧಪಟ್ಟ ನಿಧಿಗೆ ಮರುಸಂದಾಯ ಮಾಡುವುದು. ಸಾಹಿತ್ಯಗಳನ್ನು ಶಿಬಿರದ ಸ್ಥಳದಲ್ಲಿ ಖರೀದಿಸ ಬಹುದು. |
| ತರಬೇಕಾದ ವಸ್ತುಗಳು | ಬದಲಾಯಿಸಲು ಉಡುಪು, ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, ಲೇಖನಿ ಸಾಮಗ್ರಿಗಳು, ಡ್ರಾಯಿಂಗ್ ಶೀಟ್, ಸ್ಕೇಚ್ ಪೆನ್ ಮೂರು ಮೀಟರ್ ಬಿಳಿ ಕಾಟನ್ ಹಗ್ಗ (ಅರ್ಧ ಇಂಚ್ ದಪ್ಪ), ಸೂಜಿ ದಾರ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ.<br><br>ಸಮವಸ್ತ್ರ:<br>ರೋವರ್ ಸ್ಕೌಟ್ ಲೀಡರ್: ಸಮವಸ್ತ್ರಕ್ಕೆ (ಬೂದಿ ಬಣ್ಣದ ಅರ್ಧತೋಳಿನ ಬುಜಪಟ್ಟಿ, ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ್, ನೀಲಿ ಬಣ್ಣದ ಪ್ಯಾಂಟ್ (ಪೋಲೀಸ್ ಡ್ರೆಸ್ ಮಾದರಿಯಲ್ಲ ಇರಬೇಕು ) ಸ್ಕ್ರಾಫ್, ಓಗಲ್, ಬ್ಲೂ ಬೆರೆಟ್ ಟೋಪಿ, ಕರಿ ಬಣ್ಣದ ಲೇಸ್ ಇರುವ ಷೂ, ಕರಿ ಬಣ್ಣದ ಕಾಲು ಚೀಲ).<br><br>ರೇಂಜರ್ ಲೀಡರ್: ಸಮಸ್ತ್ರಕ್ಕೆ (ಬಿಳಿ ಬಣ್ಣದ ಅರ್ಧತೋಳಿನ ಭುಜಪಟ್ಟಿ ಇರುವ ಮತ್ತು ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ, ಬೆಲ್ಟ್, ನೀಲಿ ಬಣ್ಣದ ಸೀರೆ ತೆಳುವಲ್ಲದ), ಕಪು ಪೆಟಿಕೋಟ್, ಸ್ಕ್ರಾಫ್, ಓಗಲ್, ಕಪ್ಪು ಷೂ, ಕಂದು ಬಣ್ಣದ ಕಾಲು ಚೀಲ (**camel colour)** |
| ಜಿಲ್ಲೆಗೆ ನಿಗಧಿಪಡಿಸಿರುವ ಕೋಟ | ಪ್ರತಿ ಜಿಲ್ಲೆಯಿಂದ 25 ಉಪನ್ಯಾಸಕರು<br>25 ಉಪನ್ಯಾಸಕಿಯರು |
| ನೊಂದಾಯಿಸಲು ಕಡೆಯ ದಿನಾಂಕ | 15.09.2021ರ ಒಳಗಾಗಿ ಉಪನ್ಯಾಸಕರುಗಳ ಪಟ್ಟಿಯನ್ನು ರಾಜ್ಯ ಸಂಸ್ಥೆಗೆ ಕಳುಹಿಸುವುದು.<br>**Register in the Given Link -** http://rebrand.ly/BasicCourseApplication |
| ಸಂಪರ್ಕಿಸಬೇಕಾಗದ ಮೊ.ಸಂಖ್ಯೆ | ಶ್ರೀ. ಎಲ್.ಟಿ. ಲೋಕೇಶ್, ಸಹಾಯಕ ಕಾರ್ಯದರ್ಶಿ ಮತ್ತು ರೋವರ್ ಉಸ್ತುವಾರಿ – 9449886981<br>ಶ್ರೀಮತಿ. ಮಲ್ಲೇಶ್ವರಿ ಜುಜಾರೆ, ಎಎಸ್ಓಸಿ & ಪ್ರಭಾರಿ ರೇಂಜರ್ ಉಸ್ತುವಾರಿ –7259115730<br>ಶ್ರೀ. ನಾಗೇಶ್ ಶಿವಪೂರ್, ಎಸ್.ಟಿ.ಸಿ(ಸ್ಕೌ) – 9731854272<br>ಶ್ರೀಮತಿ ಕೆ.ವಿ. ಶಾಮಲ, ಎಸ್.ಟಿ.ಸಿ(ಗೈ) – 9980237570 |